Rotary 2025-26

ಮಿಡ್‌ಟೌನ್ ನ್ಯೂಸ್

# Midtown News

R.I. DISTRICT 3182 Zone-10 Club No. 21853 Charter Date : 16-05-1984

In House Bulletin of Rotary Club Shimoga Mid Town

R.I. President : Rtn. Francesco Arezzo
Dist. Governor : Rtn. Palaksha K.
Asst. Governor : Rtn. K.P. Shetty
President : Rtn. Harsha Kamath
Secretary : Rtn. Manjunath R.N.
Director : Rtn. Anil P. Shetty
Editor : Rtn. Anand I.R.
Co-Chairmen : Rtn. Narendra K.V.
Members : Rtn. Sreenag, Rtn. Raghupathi S., Rtn. K.V.L. Raju

*We meet on 2nd, 3rd and 4th Thursday at Rotary Mid Town Hall, SHIVAMOGGA-577201* rotaryshimogamidtown@gmail.com

Vol. 42 17 - 7 - 2025 ISSUE 2

## New Leadership Month

### ದಿನಾಂಕ 10-7-2025ರ ವಾರದ ಸಭೆಯ ವರದಿ

ದಿನಾಂಕ 10-7-2024ರ ವಾರದ ಸಭೆಯು 2025-26ನೇ ಸಾಲಿನ ಅಧ್ಯಕ್ಷ ಮತ್ತು ಆಡಳಿತ ಮಂಡಳಿಯ ಪದವಿ ಸ್ವೀಕಾರ ಸಮಾರಂಭದ ಸಭೆಯಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಪದಗ್ರಹಣ ಅಧಿಕಾರಿಗಳಾಗಿ ರೋಟರಿ ಜಿಲ್ಲೆ 3182ರ 26-27ನೇ ಸಾಲಿಗೆ ನಿಯೋಜಿತರಾಗಿರುವ ಜಿಲ್ಲಾ ಗವರ್ನರ್ ರೊ. ಬಿ.ಎಂ. ಭಟ್ ಇವರು ಆಗಮಿಸಿದ್ದರು. ವೇದಿಕೆಯಲ್ಲಿ 2024-25ನೇ ಸಾಲಿನ ಅಧ್ಯಕ್ಷರಾದ ರೊ. ಸುರೇಶ್ ಕುಮಾರ್ ಡಿ., ಕಾರ್ಯದರ್ಶಿ ರೊ. ಫಹೀಂ ಹುಸೇನ್, ಆನ್ಸ್ ಅಧ್ಯಕ್ಷೆ ಆ್ಯನ್ ಅನುರಾಧ




ಮೂರ್ತಿ, ಕಾರ್ಯದರ್ಶಿ ರೊ. ಉಮಾ ಅಮರ್, ಅಸಿಸ್ಟೆಂಟ್ ಗವರ್ನರ್ ರೊ. ಕೆ.ಪಿ. ಶೆಟ್ಟಿ , ಜೋನಲ್ ಲೆಫ್ಟಿನೆಂಟ್ ರೊ. ರಂಗರಾಜನ್ ಎನ್.ಎಸ್. ಈ ಸಾಲಿನ ಅಧ್ಯಕ್ಷರಾದ ರೊ. ಹರ್ಷ ಕಾಮತ್, ಕಾರ್ಯದರ್ಶಿ ರೊ. ಆರ್. ಎನ್. ಮಂಜುನಾಥ್ ಉಪಸ್ಥಿತರಿದ್ದರು. ಅಧ್ಯಕ್ಷರಾದ ರೊ. ಸುರೇಶ್ ಕುಮಾರ್ ಡಿ. ಇವರು ಸಭೆಗೆ ಎಲ್ಲರನ್ನು ಸ್ವಾಗತಿಸಿ ಚಾಲನೆ ನೀಡಿದರು.




ಆ್ಯನ್ ವಿದ್ಯಾ ಮಂಜುನಾಥ್, ಆ್ಯನ್ ಅನ್ನಪೂರ್ಣ ರಂಗರಾಜನ್ ಮತ್ತು ಆ್ಯನ್ ಸ್ಮಿತಾ ಆನಂದ್‌ರವರ ಪ್ರಾರ್ಥನೆಯೊಂದಿಗೆ ಸಭೆ ಪ್ರಾರಂಭವಾಯಿತು. ವೇದಿಕೆಯ ಮೇಲಿದ್ದ ಗಣ್ಯರು ದೀಪವನ್ನು ಬೆಳಗಿಸುವ ಮೂಲಕ ಶುಭಕೋರಿದರು. ನಂತರ ನಿರ್ಗಮಿತ ಅಧ್ಯಕ್ಷರಾದ ರೊ. ಸುರೇಶ್ ಕುಮಾರ್ ಡಿ. ಇವರು ತಮ್ಮ ಒಂದು ವರ್ಷ ಅವಧಿಯಲ್ಲಿ ಕ್ಲಬ್ಬಿನ ಅಧ್ಯಕ್ಷನಾಗಿ ಸೇವೆ ಸಲ್ಲಿಸಿರುವುದು ಸಮಾಧಾನ ತಂದಿದೆ ಎಂದು ತಿಳಿಸಿದರು. ತಮ್ಮ ಅವಧಿಯಲ್ಲಿ ಸಹಕಾರ ನೀಡಿದ ಎಲ್ಲಾ ಸದಸ್ಯರಿಗಳಿಗೂ ಧನ್ಯವಾದಗಳನ್ನು ಅರ್ಪಿಸಿದರು.

ಇದಕ್ಕೂ ಮುನ್ನ ಬೆಕ್ಕಿನ ಕಲ್ಮಠ ಗುರುಗಳಾದ ಡಾ|| ಮಲ್ಲಿಕಾರ್ಜುನ ಮರುಘರಾಜೇಂದ್ರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ , ಆರ್.ಎಸ್.ಎಸ್. ದಕ್ಷಿಣ ಪ್ರಾಂತ್ಯದ ಪ್ರಮುಖರಾದ ಶ್ರೀ ಪಟ್ಟಾಭಿ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್. ಅರುಣ್, ಕಮ್ಯುನಿಟಿ ಸರ್ವೀಸ್ ನಿರ್ದೇಶಕರಾದ ಮತ್ತು ರೊ. ಹರ್ಷ ಕಾಮತ್‌ರವರ ನೇತೃತ್ವದಲ್ಲಿ ಗೋಪೂಜೆ ಹಾಗೂ

## ವಾರದ ಸಭೆ







- 2ನೇ ಪುಟಕ್ಕೆ

- 1ನೇ ಪುಟದಿಂದ

ಗೋದಾನ ನೆರವೇರಿಸಲಾಯಿತು. ಈ ವರ್ಷದ ಐದು ಪ್ರಮುಖ ಯೋಜನೆಗಳಾದ ಗೋವರ್ಷ, ರಕ್ಷಕರಿಗೆ ರಕ್ಷೆ, ಹಸಿರೆ ಉಸಿರು, ಸ್ವರ್ಣ ಸಿಂಚನ,





ಶ್ರವಣ ಸ್ಪರ್ಷ, ಜ್ಞಾನಪಥ ಕಾರ್ಯಕ್ರಮಗಳಿಗೆ ಅತಿಥಿ ಗಣ್ಯರೆಲ್ಲರೂ ಚಾಲನೆಯನ್ನು ನೀಡಿದರು.



ವೇದಿಕೆಯ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀಗಳು ಸಾನಿಧ್ಯ ವಹಿಸಿ ಆಶೀರ್ವಚನದ ಮೂಲಕ ಎಲ್ಲರಿಗೂ ಶುಭ ಹಾರೈಸಿದರು. ನಂತರ ಶ್ರೀ ಪಟ್ಟಾಭಿ ರಾಮ್‌ರವರು ಗೋವುಗಳ ಮಹತ್ವವನ್ನು ತಿಳಿಸಿ ಗೋವರ್ಷ ಒಂದು ವರ್ಷಕ್ಕೆ ಸೀಮಿತವಾಗದೆ ನಿರಂತರವಾಗಿ ನಡೆಸಿಕೊಂಡು ಹೋಗುವಂತೆ ಸಲಹೆ ನೀಡಿದರು. ಗೌರ್ನರ್ ರೊ. ಡಿ.ಜಿ. ಪಾಲಾಕ್ಷ ಇವರ ಅನುಪಸ್ಥಿತಿಯಲ್ಲಿ ಅವರ ದೃಶ್ಯ ಮಾಧ್ಯಮದ ಮೂಲಕ ಸಂದೇಶವನ್ನು ನೀಡಿದರು.

ಪದವಿ ಪ್ರದಾನ ಅಧಿಕಾರಿಗಳಾಗಿ ಆಗಮಿಸಿದ್ದ ರೊ. ಬಿ.ಎಂ. ಭಟ್ ಇವರ ಪರಿಚಯವನ್ನು ರೊ. ಕಿರಣ್‌ಕುಮಾರ್ ಇವರು ಸಭೆಗೆ ಪರಿಚಯಿಸಿದರು. ಹಾಗೂ ಅಸಿಸ್ಟೆಂಟ್ ಗವರ್ನರ್‌ರಾದ ರೊ. ಕೆ.ಪಿ. ಶೆಟ್ಟಿ ಇವರನ್ನು ರೊ. ಅನಿಲ್ ಪಿ. ಶೆಟ್ಟಿ. ಹಾಗೂ ಜೋನಲ್ ಲೆಫ್ಟಿನೆಂಟ್ ರೊ. ರಂಗರಾಜನ್ ಎನ್.ಎಸ್. ಇವರನ್ನು ರೊ. ಉದಯ್ ಪೇಟೆ ಇವರು ಪರಿಚಯ ಮಾಡಿಕೊಟ್ಟರು. ಈ ಸಾಲಿನ ಅಧ್ಯಕ್ಷರಾದ ರೊ. ಹರ್ಷ ಕಾಮತ್ ಇವರ ಪರಿಚಯವನ್ನು ರೊ. ಜಿನತ್ ಅಂಬರೀನ್ ಮಾಡಿದರು. ಕಾರ್ಯದರ್ಶಿ ರೊ. ಆರ್.ಎನ್. ಮಂಜುನಾಥ್‌ರವರ ಪರಿಚಯವನ್ನು ರೊ. ಶಿಲ್ಪಾ ಹೆಚ್.ಜಿ. ಮಾಡಿಕೊಟ್ಟರು.




2025-26ನೇ ಸಾಲಿನ ಅಧ್ಯಕ್ಷರಾದ ರೊ. ಹರ್ಷ ಕಾಮತ್, ಕಾರ್ಯದರ್ಶಿ ರೊ. ಆರ್.ಎನ್. ಮಂಜುನಾಥ್ ಹಾಗೂ ಕಾರ್ಯಕಾರಿ ಮಂಡಳಿಯ ಸದಸ್ಯರಿಗೆ ಪದ ಪ್ರಧಾನ ಅಧಿಕಾರಿಗಳಾದ ರೊ. ಬಿ.ಎಂ. ಭಟ್ ಪಿನ್ ತೊಡಿಸುವ ಮೂಲಕ ಎಲ್ಲರಿಗೂ ಶುಭ ಹಾರೈಸಿದರು. ಹಾಗೂ ಆ್ಯನ್ಸ್ ಕ್ಲಬ್ ಅಧ್ಯಕ್ಷೆಯಾದ ಆ್ಯನ್ ಪವಿತ್ರ ಕಾಮತ್, ಕಾರ್ಯದರ್ಶಿ ರೊ.




ಪ್ರೀತಿ ದೀಪಕ್ ಮತ್ತು ಅವರ ಆಡಳಿತ ಮಂಡಳಿಯ ಸದಸ್ಯರುಗಳಿಗೂ ಪುಷ್ಪವನ್ನು ನೀಡಿ ಶುಭ ಕೋರಿದರು.

ಪದವಿ ಸ್ವೀಕಾರದ ನಂತರ ಅಧ್ಯಕ್ಷರಾದ ರೊ. ಹರ್ಷ ಕಾಮತ್ ಇವರು




– 2ನೇ ಪುಟಕ್ಕೆ

- 2ನೇ ಪುಟದಿಂದ

ಒಂದು ವರ್ಷ ಅವರ ಅವಧಿಯಲ್ಲಿ ತಾವು ಕೈಗೊಳ್ಳಲಿರುವ ಕೆಲವು ಮುಖ್ಯ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ತಿಳಿಸಿದರು. ಹಾಗೂ ಈ




ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಲು ನಿಮ್ಮಗಳ ಸಹಕಾರ ಬಹಳ ಮುಖ್ಯ. ಆದ್ದರಿಂದ ಎಲ್ಲರು ನಮ್ಮ ಈ ಸೇವಾ ಕೈಂಕರ್ಯಗಳಿಗೆ ತಮ್ಮ ಕೈ




ಜೋಡಿಸಬೇಕಾಗಿ ವಿನಂತಿಸಿಕೊಂಡರು.

ನಂತರ ನಮ್ಮ ಕ್ಲಬ್ಬಿನ ಈ ಸಾಲಿನ ಪ್ರಥಮ ಮಿಡ್‌ಟೌನ್ ನ್ಯೂಸ್




ಪತ್ರಿಕೆಯ ಬಿಡುಗಡೆಯ ಕಾರ್ಯಕ್ರಮವನ್ನು ಜೋನಲ್ ಲೆಫ್ಟಿನೆಂಟ್‌ರಾದ ರೊ. ರಂಗರಾಜನ್ ಎನ್.ಎಸ್. ರವರು, ನೆರವೇರಿಸಿ ಮಾತನಾಡುತ್ತ, ಕ್ಲಬ್ಬಿನ ಎಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ ನೆರವೇರಲು ಅಧ್ಯಕ್ಷರ ಮತ್ತು ಕಾರ್ಯದರ್ಶಿಯವರ ಕುಟುಂಬವರ್ಗದವರ ಸಹಕಾರ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ ಹಾಗೂ ಮುಂದಿನ ದಿನಗಳಲ್ಲಿ ನಿಮ್ಮ ಎಲ್ಲಾ ಚಟುವಟಿಕೆಗಳಿಗೆ ನನ್ನ ಸಹಕಾರ ಇರುತ್ತದೆ ಎಂದು ಭರವಸೆ ನೀಡಿದರು.

ಪದಗ್ರಹಣ ಅಧಿಕಾರಿಗಳಾಗಿ ಆಗಮಿಸಿದ್ದ ರೊ. ಬಿ.ಎಂ. ಭಟ್ ರವರು ಮಾತನಾಡುತ್ತಾ ರೋಟರಿ ಸಂಸ್ಥೆಯ ಧ್ಯೇಯ ಬಹಳ




ಉತ್ತಮವಾದದ್ದು, ಈ ದಿಶೆಯಲ್ಲಿ ಪ್ರತಿಯೊಬ್ಬ ರೋಟರಿ ಸದಸ್ಯರೂ ತಮ್ಮನ್ನು ಸಮಾಜದೊಡನೆ ತೊಡಗಿಸಿಕೊಂಡು ಅನೇಕ ಶ್ರೇಷ್ಟ ಸೇವೆಯನ್ನು ನಡೆಸಿದ್ದಾರೆ. ಅದೇ ರೀತಿ 2025-26ರ ನೂತನ ಅಧ್ಯಕ್ಷ ಪದವಿ ಸ್ವೀಕರಿಸಿರುವ ರೊ. ಹರ್ಷ ಕಾಮತ್ ಹಾಗೂ ಅವರ ತಂಡದವರು ಗೋವರ್ಷ ಯೋಜನೆ ಮೂಕಾಂತರ ಗೋವುಗಳನ್ನು ದಾನ ಮಾಡಿ





ರೋಟರಿ ಘನತೆಯನ್ನು ಹೆಚ್ಚಿಸಿರುತ್ತಾರೆ ಎಂದು ಪ್ರಶಂಸೆಯನ್ನು ವ್ಯಕ್ತಪಡಿ




- 3ನೇ ಪುಟಕ್ಕೆ

- 3ನೇ ಪುಟದಿಂದ

ಸಿದರು. ಇದೇ ರೀತಿ ಸಮಾಜಮುಖಿ ಸೇವೆಗಳನ್ನು ರೂಪಿಸಿ, ತಮ್ಮ




ಅವಧಿಯಲ್ಲಿ ಯಶಸ್ಸನ್ನು ಗಳಿಸಲೆಂದು ಹಾರೈಸಿದರು.






ಕೊನೆಯಲ್ಲಿ ಸಂಪ್ರದಾಯದಂತೆ ಕಾರ್ಯದರ್ಶಿ ರೊ. ಆರ್.ಎನ್. ಮಂಜುನಾಥ್ ಇವರ ವಂದನಾರ್ಪಣೆ ಮುಖೇನ ಅಚ್ಚುಕಟ್ಟಾದ ಸ್ವಾಧಿಷ್ಟ



ಭೋಜನದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು. ಈ ಎಲ್ಲಾ ಕಾರ್ಯಕ್ರಮಗಳ ನಿರೂಪಣೆಯನ್ನು ಕ್ಲಬ್ಬಿನ ನಿರ್ದೇಶಕರಾದ ರೊ.



ಉಜ್ವಲಾ ರವಿ ಮತ್ತು ರೊ. ಶಿಲ್ಪಾ ಹೆಚ್.ಜಿ. ಇವರುಗಳು ಅಚ್ಚುಕಟ್ಟಾಗಿ ನೆರವೇರಿಸಿದರು.






ದಿನಾಂಕ 9-7-2025ರಂದು ಪ್ರೆಸ್ ಮೀಟ್ ನಡೆಸಲಾಯಿತು. ಕ್ಲಬ್ಬಿನ ಒಟ್ಟು ಆರು ಡಿಸ್ಟ್ರಿಕ್ಟ್ ಪ್ರಾಜೆಕ್ಟ್‌ಗಳ ಬಗ್ಗೆ ಅಧ್ಯಕ್ಷರು ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ರೊ. ಹರ್ಷ ಕಾಮತ್‌ರೊಂದಿಗೆ ಮಾಜಿ ರೋಟರಿ ಗವರ್ನರ್‌ಗಳಾದ ರೊ. ಪ್ರೊ. ಹೆಚ್.ಎಸ್. ಚಂದ್ರಶೇಖರ್, ರೊ. ಅಭಿನಂದನ್ ಶೆಟ್ಟಿ, ರೊ. ಜಿ.ಎನ್. ಪ್ರಕಾಶ್ ಹಾಗೂ ಕ್ಲಬ್ಬಿನ ಪದಾಧಿಕಾರಿಗಳು ಮತ್ತು ಸದಸ್ಯರುಗಳು ಪಾಲ್ಗೊಂಡಿದ್ದರು.

## 4 WAY TEST

**of the things we think, say or do :**

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS**?
4. Will it be **BENEFICIAL** to all concerned?

**ROTARIAN BIRTHDAY** *Greetings to*

| | |
|---|---|
| Rtn. Ramesh C.K. | Jul-15 |

**MARRIAGE ANNIVERSARY** *Greetings to*

| | |
|---|---|
| Rtn. Suresh Kumar D. | Jul-15 |
| Rtn. Veena | |

**ANN BIRTHDAY** *Greetings to*

| | |
|---|---|
| Ann. Suchithra B. Shetty | Jul-14 |